ಸಂಖ್ಯೆ.ಡಿಬಿಸಿಎಂ/ಬೆಂಗ್ರಾ/ಸಿಬ್ಬಂದಿ/ಸಿಆರ್-29/2010-11 ಜಿಲ್ಲಾ ಅಧಿಕಾರಿಗಳ ಕಚೇರಿ,
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.
ದಿನಾಂಕ:26-8-2010.

## ಪ್ರಕಟಣೆ

ಸಮಾಜ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಲ್ಲಿನ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರುವ ನಿಲಯಪಾಲಕರು ಮತ್ತು ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ 63 ವರ್ಷಗಳ ವಯೋಮಿತಿಯೊಳಗಿರುವ ನಿವೃತ್ತ ಸರ್ಕಾರಿ ನೌಕರರುಗಳಾದ ನಿಲಯಪಾಲಕರು, ಬಿಇಡಿ., ಹೊಂದಿದ ಶಿಕ್ಷಕರು ಹಾಗೂ ಕಚೇರಿ ಮೇಲ್ವಿಚಾರಕರುಗಳಿಂದ ಭರ್ತಿ ಮಾಡಿಕೊಳ್ಳಲಾಗುವುದು.

ಇಲಾಖಾವಾರು ಖಾಲಿ ಹುದ್ದೆಗಳ ಅಂದಾಜು ಸಂಖ್ಯೆ ಈ ಕೆಳಕಾಣಿಸಿದಂತಿದೆ.

| | ನಿಲಯ ಮೇಲ್ವಿಚಾರಕರು (ಮೆಟ್ರಿಕ್ ಪೂರ್ವ) | | ನಿಲಯ ಪಾಲಕರು (ಮೆಟ್ರಿಕ್ ನಂತರ) | | ಒಟ್ಟು |
|---|---|---|---|---|---|
| | ಪುರುಷ | ಮಹಿಳೆ | ಪುರುಷ | ಮಹಿಳೆ | |
| ಸಮಾಜ ಕಲ್ಯಾಣ ಇಲಾಖೆ | 8 | 5 | 3 | 2 | 18 |
| ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | 7 | 2 | - | 1 | 10 |
| ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | - | - | - | - | - |
| ಒಟ್ಟು | 15 | 7 | 3 | 3 | 28 |

ಆಸಕ್ತರು ಹೆಚ್ಚಿನ ಮಾಹಿತಿಗಾಗಿ, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ/ಯೋಜನಾ ಸಮನ್ವಯಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ:9-9-2010.

ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ದಾಖಲಾತಿಗಳೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು.

ದೂರವಾಣಿ ಸಂಖ್ಯೆ 080 22240483

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಚೇರಿ,
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ನಂ.4, 4ನೇ ಮುಖ್ಯರಸ್ತೆ, 16ನೇ ಕ್ರಾಸ್, ಸಂಪಂಗಿರಾಮನಗರ ಪೋಲೀಸ್ ಠಾಣೆ ಎದುರು,
ಬೆಂಗಳೂರು-27.
ದೂರವಾಣಿ ಸಂಖ್ಯೆ: 22240483.

ಸದಸ್ಯ ಕಾರ್ಯದರ್ಶಿ, ಆಯ್ಕೆ ಸಮಿತಿ,
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ಸಮಾಜ ಕಲ್ಯಾಣ ಇಲಾಖೆ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಖಾಲಿ ಇರುವ ನಿಲಯ ಪಾಲಕರ/ನಿಲಯ ಮೇಲ್ವಿಚಾರಕರ ಹುದ್ದೆಗಳಿಗೆ**

**ಅರ್ಜಿ**

(ನಿವೃತ್ತಿ ಸರ್ಕಾರಿ ನೌಕರರು, ಅಂದರೆ ನಿಲಯ ಪಾಲಕರು/ಶಿಕ್ಷಕರು/ನಿಲಯ ಮೇಲ್ವಿಚಾರಕರು)

| | | |
|---|---|---|
| 1 | ಹೆಸರು | |
| 2 | ವಿಳಾಸ | |
| 3 | ಜನ್ಮ ದಿನಾಂಕ | |
| 4 | ವಿದ್ಯಾರ್ಹತೆ | |
| 5 | ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ ದಿನಾಂಕ<br>ಹುದ್ದೆ<br>ಇಲಾಖೆ | |
| 6 | ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಹಿಂದುಳಿದ ಜಾತಿಗೆ ಸೇರಿದವರೆ? | ಹೌದು/ಇಲ್ಲ (ಹೌದು ಎಂದಾದರೆ ವಿವರಗಳನ್ನು ನಮೂದಿಸುವುದು) |
| 7 | ನಿವೃತ್ತಿ ಅಂತಿಮದಲ್ಲಿ ಪಡೆದ ವೇತನ | |
| 8 | ಪಡೆಯುತ್ತಿರುವ ಮಾಸಿಕ ನಿವೃತ್ತಿ ವೇತನ | |
| 9 | ಯಾವುದಾದರೂ ಇಲಾಖಾ ವಿಚಾರಣೆ ಬಾಕಿ ಇದೆಯೆ? | |
| 10 | ಸೇವಾ ಅವಧಿಯಲ್ಲಿ ಯಾವಾಗಲಾದರೂ ಅಮಾನತ್ತಿಗೊಂಡಿದ್ದೀರಾ ಹಾಗೂ ಶಿಕ್ಷೆಗೆ ಒಳಪಟ್ಟಿದ್ದೀರಾ | |
| 11 | ಇತರೆ ಹೆಚ್ಚಿನ ಮಾಹಿತಿ | |

ಮೇಲೆ ತಿಳಿಸಿರುವ ಮಾಹಿತಿ ಹಾಗೂ ದಾಖಲೆಗಳು ನನಗೆ ತಿಳಿದ ಮಟ್ಟಿಗೆ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕ: ಅರ್ಜಿದಾರರ ಸಹಿ

**ಸೂಚನೆ:-** ಅರ್ಜಿದಾರರು ಅರ್ಜಿಯ ಜೊತೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸತಕ್ಕದ್ದು.

ಅ) ದೇಹದಾರ್ಢ್ಯತೆಯ ಬಗ್ಗೆ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪಡೆದಿರುವ ದೃಢೀಕರಣ ಪತ್ರ

ಆ) ನಿವೃತ್ತಿ ಕೊನೆಯಲ್ಲಿ ಪಡೆದಿರುವ ವೇತನ ಮತ್ತು ಪಡೆಯುತ್ತಿರುವ ಮಾಸಿಕ ನಿವೃತ್ತಿ ವೇತನದ ದಾಖಲೆಗಳು [PPO XEROX copy]